ಉಳ್ಳಾಲ ಕ್ಷೇತ್ರದ ಕೊಣಾಜಿ ಪೋಲೀಸ್ ಠಾಣೆಗೆ ಜೀಪ್ ಒದಗಿಸುವುದು

277 (611) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಒಟ್ಟು ಪೋಲೀಸ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು ಮತ್ತು ಸಿಬ್ಬಂದಿಯ ಸಂಖ್ಯೆ ಎಷ್ಟು ; (ಸಿಬ್ಬಂದಿಯ ಬಗ್ಗೆ ಹುದ್ದೆವಾರು ಮಾಹಿತಿ ಒದಗಿಸುವುದು)

ಆ) ಇವುಗಳ ಪೈಕಿ ಜೀಪ್ ವ್ಯವಸ್ಥೆ ಇಲ್ಲದೆ ಇರುವ ಪೋಲೀಸ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು?

ಇ) ಉಳ್ಳಾಲ ಕ್ಷೇತ್ರದ ಕೊಣಾಜಿ ಪೋಲೀಸ್ ಸ್ಟೇಷನ್‌ಗೆ ಜೀಪ್ ಮಂಜೂರಾಗಿದ್ದರೂ ಸಹ ಜೀಪ್ ಕೊಡದೆ ಇರಲು ಕಾರಣವೇನು? ಮತ್ತು ಎಂದು ಕೊಡಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಗೃಹ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 26ಪೋಲೀಸ್ ಠಾಣೆಗಳು (ಒಂದು ಮಹಿಳಾ ಪೋಲೀಸ್ ಠಾಣೆ ಸೇರಿಸಿ) ಕಾರ್ಯನಿರ್ವಹಿಸುತ್ತಿವೆ.

ಹುದ್ದೆವಾರು ಸಿಬ್ಬಂದಿ ವಿವರ ಈ ಕೆಳಗಿನಂತಿದೆ.

1)	ಸಿಪಿಐ:ಪಿ.ಐ	- 18
2)	ಪಿ.ಎಸ್.ಐ	- 56
3)	ಎ.ಎಸ್.ಐ	- 79
4)	ಹೆಚ್.ಸಿ	-251
5)	ಮಹಿಳಾ ಮುಖ್ಯಪೇದೆ	- 20
6)	ಪೇದೆಗಳು	-701
7)	ಮಹಿಳಾ ಪೇದೆಗಳು	- 62
	ಒಟ್ಟು	**1187**

ಆ) ಒಟ್ಟು 26 ಪೋಲೀಸ್ ಠಾಣೆಗಳಲ್ಲಿ 7 ಪೋಲೀಸ್ ಠಾಣೆಗಳಿಗೆ ಜೀಪುಗಳನ್ನು ಒದಗಿಸಿರುವುದಿಲ್ಲ.
ಅವುಗಳ ವಿವರ

1) ಮಂಗಳೂರು ಪೂರ್ವ ಟ್ರಾಫಿಕ್ ಠಾಣೆ
2) ಮಂಗಳೂರು ಪಶ್ಚಿಮ ಟ್ರಾಫಿಕ್ ಠಾಣೆ
3) ಕೊಣಜಿ ಪೋಲೀಸ್ ಠಾಣೆ
4) ಮಂಗಳೂರು ರೇವು ಪೋಲೀಸ್ ಠಾಣೆ
5) ಪೆರಂಬೂರು ಪೋಲೀಸ್ ಠಾಣೆ
6) ಕಡಬ ಪೋಲೀಸ್ ಠಾಣೆ
7) ವೇಣೂರು ಪೋಲೀಸ್ ಠಾಣೆ

ಇ) ಜಿಲ್ಲೆಯಲ್ಲಿ ಜೀಪುಗಳ ಕೊರತೆ ತೀವ್ರವಾಗಿದ್ದು 2 ಜೀಪುಗಳನ್ನು ನಿರಪಯುಕ್ತ ಎಂದು ಘೋಷಿಸಿದೆ. ಹೊಸ ಜೀಪುಗಳನ್ನು ಖರೀದಿಸಿದ ತಕ್ಷಣ ಕೊಣಾಜಿ ಠಾಣೆಗೆ ಜೀಪು ಒದಗಿಸುವ ವ್ಯವಸ್ಥೆ ಮಾಡಲಾಗುವುದು. ಈ ಮಧ್ಯೆ ಕೊಣಾಜಿ ಠಾಣೆಗೆ ಮೋಟಾರ್ ಸೈಕಲ್‌ನ್ನು ಒದಗಿಸಲಾಗಿದೆ.

ರೈತರಿಂದ ವಿದ್ಯುಚ್ಛಕ್ತಿ ಮಂಡಳಿ ಬಾಕಿ ವಸೂಲು ಮಾಡುತ್ತಿರುವುದು

278 (614) ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧ ವರ್ಗಗಳ ಗ್ರಾಹಕರಿಗೆ ವಿದ್ಯುಚ್ಛಕ್ತಿ ಮಂಡಳಿ ನಿಗಧಿ ಪಡಿಸಿದ ದರಗಳು ಯಾವುವು ;

ಆ) ಒಂದು ಬಾರಿ ಹೆಚ್ಚು ಮಾಡಿದ ದರಗಳನ್ನು ಪುನರ್‌ಪರಿಶೀಲಿಸಿ ಕಡಿಮೆ ಮಾಡಿದ ಪ್ರಸಂಗಗಳುಗಳಿವೆಯೇ ;

ಇ) ಹಾಗಿದ್ದಲ್ಲಿ ಈ ರೀತಿ ಪುನರ್ ಪರಿಶೀಲನೆ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವುವು ;

ಈ) ರೈತರ ಪಂಪುಸೆಟ್ಟುಗಳಿಗೆ ನಿಗದಿ ಪಡಿಸಿದ ಡೆಫಾಜಿಟ್ ಹಣ ಎಷ್ಟ ; (ವಿವರಗ ಒದಗಿಸುವುದು)

ಉ) ರಾಜ್ಯದ ರೈತರಿಂದ ಹಲವಾರು ವರ್ಷಗಳ ಬಾಕಿ ಎಂದುಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವಿವಿಧವರ್ಗಗಳ ಗ್ರಾಹಕರಿಗೆ ವಿದ್ಯುಚ್ಛಕ್ತಿ ಮಂಡಳಿ ನಿಗಧಿಪಡಿಸಿದ ದರಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು, ಇವೆ.

ಇ) ಒಂದು ಬಾರಿ ಹೆಚ್ಚು ಮಾಡಿದ ದರಗಳನ್ನು ಪುನರ್ ಪರಿಶೀಲಿಸಿ ಕಡಿಮೆ ಮಾಡಿದ ಪ್ರಸಂಗಗಳು ಒಟ್ಟು ಎರಡು. ಈ ವಿವರಗಳು ಕೆಳಕಂಡಂತಿವೆ.

1) 1997ರಲ್ಲಿ ಎಲ್. ಟಿ. 4 (ಸಿ) ಕಾಫಿ, ಟೀ, ತೆಂಗು ಮತ್ತು ಅಡಿಕೆ ತೋಟಗಳಿಗೆ ನಿಗಧಿಗೊಳಿಸಿದ್ದ ರೂ. 500ಪ್ರತಿ ಅಶ್ವಶಕ್ತಿಗೆ ಇದ್ದವಿದ್ಯುತ್ ದರವನ್ನು ರೂ. 300ಪ್ರತಿ ಅಶ್ವಶಕ್ತಿಗೆ ಇಳಿಸಲಾಯಿತು.

2) 1998ರಲ್ಲಿ ಎಲ್. ಟಿ. 1 (ಬಿ) ಗೃಹಬಳಕೆದೀಪ, ಎಲ್. ಟಿ. 2 (ಎ) ಸರ್ವ ವಿದ್ಯುತ್ ಗೃಹ ಬಳಕೆ ಮತ್ತು ಎಲ್. ಟಿ. 5 ಕೈಗಾರಿಕೆಗಳಿಗೆ ವಿಧಿಸಿದ ದರಗಳನ್ನು ಈ ಕೆಳಕಂಡಂತೆ ಇಳಿಸಲಾಯಿತು.